ಪ್ರಾರ್ಥಿಸಿಕೊಂಡರೆ ಅವರು ಅದರ ಮೂಲಕವೇ ಕಾಣಿಸಿಕೊಳ್ಳುತ್ತಾರೆ. ಇದು ಶ್ರೀಮಾತೆಯವರ ಸ್ಪಷ್ಟ ಅಭಿಪ್ರಾಯ. ಯಾರು ನಮ್ಮ ಸ್ವಂತದವರೋ ಅವರ ವಿಷಯದಲ್ಲಿ ಮಂತ್ರ ಮುಂತಾದ ಉಪಚಾರಗಳ ಅಗತ್ಯ ತಾನೇ ಏನಿದೆ? ಅದೇ ರೀತಿ, ಶ್ರೀರಾಮಕೃಷ್ಣರನ್ನು ನಿನ್ನ ಸ್ವಂತದವರೆಂದು ತಿಳಿದುಕೊಳ್ಳಬೇಕು. "ಬನ್ನಿ, ಕುಳಿತುಕೊಳ್ಳಿ, ತೆಗೆದುಕೊಳ್ಳಿ, ತಿನ್ನಿ" ಎಂದು ಸರಳಭಾವದಿಂದ ಹೇಳಬೇಕು. ಶ್ರೀರಾಮಕೃಷ್ಣರು ಬಂದಿದ್ದಾರೆ, ಕುಳಿತುಕೊಂಡಿದ್ದಾರೆ, ತಿನ್ನುತ್ತಿದ್ದಾರೆ ಎಂದು ತಿಳಿಯಬೇಕು. ಇದು ಶ್ರೀಮಾತೆಯವರು ಶ್ರೀರಾಮಕೃಷ್ಣರ ಪೂಜೆ, ನೈವೇದ್ಯದ ವಿಷಯದಲ್ಲಿ ಹೇಳುವ ಕಿವಿಮಾತು.

### ಸಾಂತ್ವನದ ಸುಧೆ

**ಹತಾಶರಾಗಬೇಡಿ:** ಶ್ರೀರಾಮಕೃಷ್ಣರಲ್ಲಿ ಶರಣಾಗತರಾದವರು ಖಂಡಿತ ನಿರಾಶರಾಗಬೇಕಾದ್ದಿಲ್ಲ ಎಂದು ಶ್ರೀಮಾತೆ ತಮ್ಮ ಭಕ್ತರಿಗೆ ಖಡಾಖಂಡಿತವಾಗಿ ಹೇಳುತ್ತಿದ್ದರು. "ಶ್ರೀರಾಮಕೃಷ್ಣರಲ್ಲಿ ನಿಷ್ಠೆ ಇಡು; ಅವರ ಪಾದಗಳಲ್ಲಿ ಶರಣಾಗು. ನೀನು ಅವರನ್ನು ತಂದೆಯೆಂದಾದರೂ ಕರೆ, ತಾಯಿ ಎಂದಾದರೂ ಕರೆ, ಯಾವಾಗಲೂ ನಿನ್ನನ್ನು ಕಾಪಾಡುವವರೊಬ್ಬರು ನಿನ್ನ ಹಿಂದೆ ಇದ್ದಾರೆ ಎಂದು ನೆನಪಿಟ್ಟುಕೋ" ಎಂದು ಅವರು ಭಕ್ತರೊಬ್ಬರಿಗೆ ಉಪದೇಶಿಸುತ್ತಾರೆ. ಭಕ್ತರು ಅಸಹಾಯಕತೆಯ ಭಾವವನ್ನು ತಳೆಯಬಾರದು. ಒಳ್ಳೆಯದು, ಕೆಟ್ಟದ್ದು – ಎಲ್ಲದರ ನಡುವೆಯೂ ಶ್ರೀರಾಮಕೃಷ್ಣರು ನಿಮಗೆ ದಾರಿ ತೋರುತ್ತಿಲ್ಲವೇ? ಎಂದು ಅವರು ಕೇಳುತ್ತಾರೆ.

**ದಿವ್ಯೌಷಧಿ:** ಭವಸಂಕಟದಿಂದ ಪಾರಾಗಲು ಶ್ರೀರಾಮಕೃಷ್ಣ ಮಂತ್ರವು ದಿವ್ಯೌಷಧಿ ಎಂದು ಶ್ರೀಮಾತೆ ತಿಳಿಸಿಕೊಡುತ್ತಾರೆ. ಅವರ ಪ್ರಕಾರ ಜೀವನದ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳುವ ಅತ್ಯುತ್ತಮ ಉಪಾಯವೆಂದರೆ ಶಾಂತ ವಾತಾವರಣದಲ್ಲಿ ಶ್ರೀರಾಮಕೃಷ್ಣರ ನಾಮವನ್ನು ಸ್ಮರಿಸುವುದು. ಅವರ ಸ್ಮರಣೆಯಿಂದ ಎಲ್ಲ ಕಷ್ಟಗಳೂ ದೂರವಾಗುತ್ತವೆ ಎನ್ನುತ್ತಾರೆ ಶ್ರೀಮಾತೆ.

ಶ್ರೀಮಾತೆಯವರು ಬೇರೆಯಲ್ಲ, ಶ್ರೀರಾಮಕೃಷ್ಣರು ಬೇರೆಯಲ್ಲ. "ನನ್ನ ಮತ್ತು ಅವರ ನಡುವೆ ಯಾವುದೇ ವ್ಯತ್ಯಾಸ ಮಾಡಬೇಡ" ಎಂದು ಅವರೇ ಒಂದು ಕಡೆ ಹೇಳುತ್ತಾರೆ. 'ಶ್ರೀರಾಮಕೃಷ್ಣಗತಪ್ರಾಣ'ರಾದ ಶ್ರೀಮಾತೆಯವರ ಮೂಲಕ ಶ್ರೀರಾಮಕೃಷ್ಣರ ಕೃಪೆ ನಮ್ಮ ಮೇಲೆ ಹರಿದುಬರಲಿ ಎಂದು ಅವರನ್ನು ಪ್ರಾರ್ಥಿಸಿಕೊಳ್ಳೋಣ. ✷


## ಶ್ರೀರಾಮಕೃಷ್ಣರ 175ನೇ ಜನ್ಮಜಯಂತಿಯ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ

### ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ 2012

## 'ಶ್ರೀರಾಮಕೃಷ್ಣ ಬೋಧಾಮೃತ'


ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು 'ನವಯುಗಾಚಾರ್ಯ' ಎಂದು ಕರೆದು ಆರಾಧಿಸಿದರು. ಆಧುನಿಕ ಯುಗಕ್ಕೆ ಆಧ್ಯಾತ್ಮಿಕ ಬೆಳಕನ್ನು ತಂದು, ಪ್ರಪಂಚದಾದ್ಯಂತ ಲಕ್ಷಾಂತರ ಶ್ರದ್ಧಾಳುಗಳಿಗೆ ಭಗವಂತನ ಅಸ್ತಿತ್ವದಲ್ಲಿ ವಿಶ್ವಾಸವನ್ನು ಮೂಡಿಸಿದ ಕೀರ್ತಿ ಶ್ರೀರಾಮಕೃಷ್ಣರಿಗೆ ಸಲ್ಲುತ್ತದೆ. ಹಾಗೆಯೇ ಅಂತಹ ಭಕ್ತರ ಸಾಧನೆಯ ಮಾರ್ಗದಲ್ಲಿ ಬೆಂಬಿಡದ ದಾರಿದೀಪವಾಗಿ ಮುನ್ನಡೆಸುವ ಅಪೂರ್ವ ಜ್ಯೋತಿಯಾಗಿಯೂ ಆಗಿ ಅವರು ಕಂಗೊಳಿಸುತ್ತಾರೆ. ಹೀಗಾಗಿ ಅವರ ಬೋಧನೆಗಳು ನಮ್ಮ ಜೀವನದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯಾದ ಸಕಾರಾತ್ಮಕ ಪರಿವರ್ತನೆಯನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿವೆ. ನಮ್ಮ ಬಾಳನ್ನು ಉಲ್ಲಾಸಮಯವನ್ನಾಗಿಯೂ ಅರ್ಥಪೂರ್ಣವನ್ನಾಗಿಯೂ, ಸಮೃದ್ಧವನ್ನಾಗಿಯೂ ಸಾರ್ಥಕವನ್ನಾಗಿಯೂ ಪರಿವರ್ತಿಸುವ ರತ್ನದ ಗಟ್ಟಿಗಳು ಅವು. ಅವುಗಳ ವಿಸ್ತೃತವಾದ, ಮನೋಹರವಾದ ಪರಿಚಯವನ್ನು ಈ ಸಂಚಿಕೆಯಲ್ಲಿ ಕಾಣಬಹುದು. ಇದರ ವಿಶೇಷತೆಯೆಂದರೆ ರಾಮಕೃಷ್ಣ ಸಂಪ್ರದಾಯಕ್ಕೆ ಸೇರಿದ ಸಾಧು ಬ್ರಹ್ಮಚಾರಿಗಳು ಮತ್ತು ಮಾತಾಜಿಯವರು ಮಾತ್ರವೇ ಬರೆದ ಲೇಖನಗಳಿಂದ ಇದು ಕೂಡಿರುವುದು. ಯುವ ಕಲಾವಿದ ಶ್ರೀ ಸೋಮಶೇಖರ್ ಅವರು ರಚಿಸಿದ ವರ್ಣರಂಜಿತ ಚಿತ್ರಗಳು ಮತ್ತು ಮುಖಪುಟ, ಆಕರ್ಷಕ ವಿನ್ಯಾಸದಿಂದ ಒಡಗೂಡಿದ ವರ್ಣಮಯ ಪುಟಗಳು ಈ ಸಂಚಿಕೆಯ – ಇನ್ನಿತರ ವೈಶಿಷ್ಟ್ಯಗಳು. ನೂತನ ವರ್ಷಾರಂಭದಲ್ಲಿ ನಿಮ್ಮ ಸ್ನೇಹಿತರಿಗೆ, ಬಂಧುಗಳಿಗೆ ನೀಡಬಹುದಾದ ಅಪೂರ್ವ ಕೊಡುಗೆ ಇದು. ಹೆಚ್ಚುವರಿ ಪ್ರತಿಗಳಿಗಾಗಿ ಇಂದೇ ಬೇಡಿಕೆ ಸಲ್ಲಿಸಿ. ಸಾತ್ವಿಕ ಆನಂದವನ್ನೂ ಎಲ್ಲ ಕಡೆ ಹಂಚಿಕೊಳ್ಳಿ.

**100 ಕ್ಕೂ ಹೆಚ್ಚು ಪುಟಗಳಿಂದ ಕೂಡಿದ ಈ ಸಂಗ್ರಹಯೋಗ್ಯವಾದ ಸಂಪುಟದ ಬೆಲೆ : ₹ 40**

**ವಿವೇಕಪ್ರಭ ಪತ್ರಿಕೆಯ ಚಂದಾದಾರರಿಗೆ ಉಚಿತ; 10 ಮತ್ತು ಹೆಚ್ಚಿನ ಪ್ರತಿಗಳಿಗೆ ಶೇ. 15 ರಿಯಾಯತಿ**

**ಇಂದೇ ಕಾದಿರಿಸಿ**

*ಭಗವದ್ಗೀತೆಯು ನಮ್ಮ ಜೀವನಮಾರ್ಗದಲ್ಲಿ ತತ್ತ್ವಜ್ಞಾನದ ಬೆಳಕನ್ನು ನೀಡಿ ಮುನ್ನಡೆಸುವ ದಾರಿದೀಪವಾಗಿದೆ. ಇದರಲ್ಲಿ ಬರುವ ಹಲವು ಹತ್ತು ತಾತ್ತ್ವಿಕಾಂಶಗಳ ಪರಿಚಯವು ಗೀತೆಯ ಅಧ್ಯಯನಕ್ಕೆ ಪೂರಕವಾಗಿದೆ. ಇದಕ್ಕೆ ಸಹಾಯಕವಾಗುವ ಅತ್ಯಂತ ಉಪಯುಕ್ತವಾದ ಲೇಖನ ಮಾಲೆಯೊಂದನ್ನು 'ಗೀತಾ ಜಯಂತಿ' ಯ ಸಂದರ್ಭದಲ್ಲಿ ಆರಂಭಿಸುತ್ತಿದ್ದೇವೆ. ಭಗವದ್ಗೀತೆ ಯಲ್ಲಿ ಬರುವ ಹಲವಾರು ವಿಷಯಗಳಿಗೆ ತರ್ಕಬದ್ಧವಾಗಿ, ಪ್ರಾಯೋಗಿಕ ನೆಲೆಯಲ್ಲಿ, ನಮ್ಮ ಮನಸ್ಸಿಗೆ ತಟ್ಟುವ ಹಾಗೆ ನೀಡಿರುವ ವಿವರಣೆ ಇದರ ವೈಶಿಷ್ಟ್ಯ. ಈ ಅಪೂರ್ವ ಲೇಖನಮಾಲೆ ಯನ್ನು ರಚಿಸಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ಪತ್ರಿಕೆಯ ಪ್ರಥಮ ಸಂಪಾದಕರು ಹಾಗೂ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಹಿಂದಿನ ಅಧ್ಯಕ್ಷರು. ಈ ಲೇಖನಮಾಲೆಯನ್ನು ಪ್ರಕಟಿಸಲು 'ವಿವೇಕಪ್ರಭ'ದ ಮೇಲಿನ ತಮ್ಮ ತುಂಬು ಪ್ರೀತಿಯಿಂದ ಅನುಮತಿಯಿತ್ತಿರುವ ಪೂಜ್ಯರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು –ಸಂ.*



# ಭಗವದ್ಗೀತಾ ತತ್ತ್ವಸೌರಭ

ಸ್ವಾಮಿ ನಿತ್ಯಸ್ಥಾನಂದ

## ಸ್ವಧರ್ಮ

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಸ್ವಧರ್ಮವನ್ನು ಕುರಿತಾಗಿ ಬಹಳಷ್ಟು ಕಡೆ ಪ್ರಸ್ತಾಪಿಸುತ್ತಾನೆ. ಅರ್ಜುನನು ತನ್ನ ಸ್ವಧರ್ಮವನ್ನು ಮರೆತು ಯುದ್ಧವಿಮುಖನಾಗಲು ಉದ್ಯುಕ್ತನಾದಾಗ ಶ್ರೀಕೃಷ್ಣನು ಮತ್ತೆ ಮತ್ತೆ ವಿವಿಧ ರೀತಿಯಲ್ಲಿ, ಅವನ ಸ್ವಧರ್ಮವನ್ನು ಅವನಿಗೆ ನೆನಪಿಸಿ ಕೊಡುತ್ತಾನೆ. ಹಾಗೆಯೇ ಎಲ್ಲರಿಗೂ ಅನ್ವಯಿಸುವ ರೀತಿಯ ಸ್ವಧರ್ಮಾಚರಣೆಗೆ ಹೆಚ್ಚು ಒತ್ತನ್ನು ನೀಡುತ್ತಾನೆ. ಸಾಮಾಜಿಕ ಸುವ್ಯವಸ್ಥೆಗೆ ಸ್ವಧರ್ಮಾಚರಣೆ ಅತ್ಯವಶ್ಯಕವೆಂಬುದನ್ನು ತನ್ನದೇ ಉದಾಹರಣೆಯ ಮೂಲಕವೂ ಮನಮುಟ್ಟಿಸಲು ಶ್ರೀಕೃಷ್ಣನು ಪ್ರಯತ್ನಿಸುತ್ತಾನೆ. "ನನಗೆ ಯಾವುದೇ ಕರ್ತವ್ಯಗಳಿಲ್ಲದಿದ್ದರೂ, ಪಡೆಯುವುದು ಅಥವಾ ಕಳೆದುಕೊಳ್ಳುವುದು ಏನೂ ಇಲ್ಲದಿದ್ದರೂ, ನಾನು ಕರ್ಮದಲ್ಲಿ ತೊಡಗಿದ್ದೇನೆ" (೩.೨೨) ಎಂದು ಅವನು ಹೇಳುತ್ತಾನೆ. ಸ್ವಧರ್ಮಾಚರಣೆಯ ಕಟ್ಟುಪಾಡುಗಳಿಂದ ಆಚೆಗೆ ಒಬ್ಬನು ಇದ್ದರೂ, 'ಶ್ರೇಷ್ಠ ರಾದವರು ಇತರರಿಗೆ ಮಾದರಿಯಾಗಿರಬೇಕು' (**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ**) ಎಂಬ ದೃಷ್ಟಿಯಿಂದಲೂ ಲೋಕಸಂಗ್ರಹದ ದೃಷ್ಟಿಯಿಂದಲೂ (**ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ**) ಅವನು ಸ್ವಧರ್ಮವನ್ನು ಆಚರಿಸತಕ್ಕದ್ದೆಂದು ಶ್ರೀಕೃಷ್ಣನು ಒತ್ತಿ ಹೇಳುತ್ತಾನೆ.

ಸ್ವಧರ್ಮವೆಂದರೆ ಏನು? ಇದು ವ್ಯಕ್ತಿಯ ಸ್ವಭಾವಕ್ಕೆ ಸಂಬಂಧಿಸಿದುದೇ? ಶ್ರೀಕೃಷ್ಣನು ಒಂದು ಕಡೆ ಈ ವಿಷಯವನ್ನು ಪ್ರಸ್ತಾಪಿಸುತ್ತ, **ಸ್ವಭಾವಜೇನ ಕೌಂತೇಯ ನಿಬದ್ಧಃ ಸ್ವೇನ ಕರ್ಮಣಾ । ಕರ್ತುಂ ನೇಚ್ಛಸಿ ಯನ್ಮೋಹಾತ್ ಕರಿಷ್ಯಸ್ಯವಶೋಽಪಿ ತತ್ ॥** "ಹೇ ಕೌಂತೇಯ ಪ್ರತಿಯೊಬ್ಬರೂ ಅವರವರ ಸ್ವಭಾವಕ್ಕೆ ಅನುಗುಣವಾದ ಕರ್ಮದಿಂದ ಬದ್ಧರಾಗಿರುತ್ತಾರೆ. 'ನೀನು ಮಾಡುವುದಿಲ್ಲ' ಎಂದು ಹೇಳಿದರೂ ಅದು ನಿನ್ನಿಂದ ಮಾಡಿಸಿಯೇ ಮಾಡಿಸುತ್ತದೆ" ಎಂದು ಹೇಳುತ್ತಾನೆ (೧೮:೬೦). ಅಂದರೆ, ಪ್ರತಿಯೊಬ್ಬರೂ ಅವರವರ ಸ್ವಭಾವಕ್ಕೆ ಅನುಗುಣವಾಗಿ ವರ್ತಿಸಬೇಕು ಎಂದಾಯಿತು. ಹಿಂಸಾತ್ಮಕ ವ್ಯಕ್ತಿಯು ಹಿಂಸಿಸುತ್ತಲೇ ಹೋಗಬೇಕು, ಕದಿಯುವ ಸ್ವಭಾವವುಳ್ಳವನು ಕದಿಯು ತ್ತಲೇ ಇರಬೇಕು ಎಂಬುದು ಇದರ ಅಭಿಪ್ರಾಯವೇ? ಹಿಂಸೆ, ಕಳ್ಳತನ ಇತ್ಯಾದಿಗಳು ವ್ಯಕ್ತಿಯ ಸ್ವಭಾವವನ್ನು ಅವಲಂಬಿಸಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇವುಗಳಿಗೆ ಸಾಮಾಜಿಕ ಒತ್ತಡ ಕಾರಣವಾಗಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಹಳೆಯ ಸಂಸ್ಕಾರಗಳು ಕಾರಣ ವಾಗಿರುತ್ತವೆ. ಇಲ್ಲಿ ಬರುವ 'ಸ್ವಭಾವ' ಎಂದರೆ, ಶ್ರೀಕೃಷ್ಣನ ದೃಷ್ಟಿಯಲ್ಲಿ ಬಹುಶಃ 'ವ್ಯಕ್ತಿವೈಶಿಷ್ಟ್ಯ' ಎಂದಿರಬೇಕು. ಪ್ರತಿಯೊಬ್ಬರೂ ತಮ್ಮದೇ ಆದ ವ್ಯಕ್ತಿವೈಶಿಷ್ಟ್ಯವನ್ನು ಹೊಂದಿರುತ್ತಾರೆ; ಅವರು ಆ ವೈಶಿಷ್ಟ್ಯಕ್ಕೆ ಅನುಗುಣವಾಗಿ ವರ್ತಿಸಬೇಕು, ಇತರರ ಅಂಧಾನುಕರಣೆ ಯುಕ್ತವಲ್ಲ ಎನ್ನುವುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಕೆಲವರು ಭಾವುಕರು, ಕೆಲವರು ವಿಚಾರಪರರು, ಕೆಲವರು ಕ್ರಿಯಾಶೀಲರು, ಕೆಲವರು ವಾಚಾಳಿಗಳು, ಮತ್ತೆ ಕೆಲವರು ಗಂಭೀರ ಸ್ವಭಾವದವರು – ಹೀಗೆ ಅನೇಕ ವ್ಯಕ್ತಿವೈಶಿಷ್ಟ್ಯಗಳಿರುತ್ತವೆ. ಈ ವೈವಿಧ್ಯಮಯ ಪ್ರಪಂಚದಲ್ಲಿ ಎಲ್ಲರ ಆವಶ್ಯಕತೆಯೂ ಇದೆ. ಹಲವು ಬಣ್ಣಗಳು ಸೇರಿ ಒಂದು ಚಿತ್ರವಾಗುವಂತೆ, ಈ ವೈವಿಧ್ಯಮಯ ಪ್ರಪಂಚದಲ್ಲಿ ಎಲ್ಲ ವೈವಿಧ್ಯತೆಗಳೂ ಇರಲೇ ಬೇಕು. ಈ ದೃಷ್ಟಿಯಿಂದ ನೋಡಿದರೆ 'ಸ್ವಧರ್ಮ' ವೆಂದರೆ ಅವರವರ ಸ್ವಭಾವಕ್ಕೆ ಅನುಗುಣವಾಗಿ ವರ್ತಿಸುವುದು. ಅದಕ್ಕೆಂದೇ, ಪರಾನು ಕರಣೆ ಒಳ್ಳೆಯದಲ್ಲ ಎಂದು ಶ್ರೀಕೃಷ್ಣನು ಒತ್ತಿ ಹೇಳುತ್ತಾನೆ.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ । ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥**

"ಸರಿಯಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತ ದೋಷದಿಂದ ಕೂಡಿದ್ದರೂ ಸ್ವಧರ್ಮವೇ ಮೇಲು. ತನ್ನ ಧರ್ಮದಲ್ಲಿ ಸಾಯುವುದು ಒಳ್ಳೆಯದು. ಪರಧರ್ಮವು ಭಯವನ್ನು ಉಂಟುಮಾಡುವಂಥದ್ದು" (೩:೩೫).

ಇನ್ನೊಂದು ದೃಷ್ಟಿಯಿಂದ ನೋಡಿದರೆ ಸ್ವ–ಧರ್ಮವೆಂದರೆ ಕರ್ತವ್ಯ. ಪ್ರತಿಯೊಬ್ಬರೂ ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು. ಉಪಾಧ್ಯಾಯನು ಬೋಧಿಸುವ ಕೆಲಸವನ್ನು ಸರಿಯಾಗಿ ನಿರ್ವಹಿಸಬೇಕು. ವಿದ್ಯಾರ್ಥಿಯು ಅಧ್ಯಯನ ಕಾರ್ಯವನ್ನು ನಿಯಮಿತವಾಗಿ ಮಾಡಬೇಕು. ಪೋಲೀಸರು ತಮ್ಮ ಕರ್ತವ್ಯವನ್ನು ತಪ್ಪದೆ ಪಾಲಿಸಬೇಕು. ರಾಜಕಾರಣಿಗಳು ನ್ಯಾಯಬದ್ಧವಾಗಿ **ರಾಜ್ಯಭಾರ** ಮಾಡಬೇಕೇ ಹೊರತು, **ರಾಜ್ಯಕ್ಕೆ ಭಾರ**ವಾಗಬಾರದು. ಗೃಹಸ್ಥನು ತನ್ನ ಗೃಹಸ್ಥ ಧರ್ಮವನ್ನು ನಿಷ್ಠೆಯಿಂದ ಪಾಲಿಸಬೇಕು. ಈ ರೀತಿ ಅವರವರು ತಮ್ಮ ಪಾಲಿಗೆ ಬಂದ ಕೆಲಸಗಳನ್ನು ನಿಷ್ಠೆಯಿಂದ ಮಾಡುವುದು ಸಮಾಜದ ಸುವ್ಯವಸ್ಥೆಗೆ ಎಷ್ಟು ಅವಶ್ಯಕ ಎಂಬುದನ್ನು ಪ್ರತ್ಯೇಕವಾಗಿಯೇನೂ ಹೇಳಬೇಕಾಗಿಲ್ಲ. **ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಾಃ** – **"**ತಮ್ಮ ತಮ್ಮ ಕರ್ಮದ ಮೂಲಕ ಭಗವಂತನನ್ನು ಆರಾಧಿಸುತ್ತ ಮಾನವರು ಸಿದ್ಧಿಯನ್ನು ಪಡೆಯುತ್ತಾರೆ**"** (೧೮. ೪೬) ಎಂದು ಭಗವದ್ಗೀತೆ ಹೇಳುತ್ತದೆ. ಇದೇ ವಿಷಯವನ್ನೇ ಇನ್ನೊಂದೆಡೆ ಶ್ರೀಕೃಷ್ಣನು ಅರ್ಜುನನಿಗೆ ಒತ್ತಿ ಹೇಳುತ್ತ, ಅವನು ತನ್ನ ಕ್ಷತ್ರಿಯ ಕರ್ತವ್ಯವಾದ ಧರ್ಮಯುದ್ಧದಿಂದ ವಿಮುಖನಾಗಬಾರದು ಎಂದು ಉಪದೇಶಿಸುತ್ತಾನೆ.

**ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ। ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ॥**

"ಸ್ವಧರ್ಮದ ದೃಷ್ಟಿಯಿಂದಲೂ ನೀನು ವಿಚಲಿತನಾಗಬೇಕಾದ ಆವಶ್ಯಕತೆಯಿಲ್ಲ. ಕ್ಷತ್ರಿಯನಿಗೆ ಧರ್ಮಸಮ್ಮತವಾದ ಯುದ್ಧಕ್ಕಿಂತ ಶ್ರೇಯಸ್ಕರವಾದುದು ಇನ್ನೊಂದಿಲ್ಲ" (೨.೩೧).

ಪ್ರತಿಯೊಂದು ವಸ್ತುವಿಗೂ ಅದರದೇ ಆದ 'ಉಪಯುಕ್ತತೆ' ಇರುತ್ತದೆ, ಅದರ 'ಸ್ವಧರ್ಮ'ವಿರುತ್ತದೆ. ಮೇಜು ಬರೆಯುವುದಕ್ಕೆ, ಕುರ್ಚಿ ಕುಳಿತುಕೊಳ್ಳುವುದಕ್ಕೆ ಇತ್ಯಾದಿ. ಅದನ್ನು ಬೇರೆ ರೀತಿಯಲ್ಲಿ ಉಪಯೋಗಿಸಬಹುದಾದರೂ ಅದಕ್ಕಾಗಿಯೇ ಉಪಯೋಗಿಸಿದರೆ ಚೆನ್ನ. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ತಾನು ಮಾಡಬೇಕಾದ ಕೆಲಸವನ್ನು ಚೆನ್ನಾಗಿ ಮಾಡಿದರೆ ಅವನಿಗೂ ಒಳ್ಳೆಯದು, ಸಮಾಜಕ್ಕೂ ಒಳ್ಳೆಯದು. ಇದು ಮೇಲುಕೀಳಿನ ಅಥವಾ ಜಾತಿಭೇದದ ಪ್ರಶ್ನೆಯಲ್ಲ. ಸಮಾಜದಲ್ಲಿ ಪ್ರತಿಯೊಂದು ಕೆಲಸವೂ ಪವಿತ್ರವೇ. ಸಾಮಾನ್ಯ ಕೆಲಸವನ್ನು ಕಡೆಗಣಿಸಿದರೂ ದೊಡ್ಡ ಅನಾಹುತವಾಗಬಹುದು. ಅನೇಕ ಅಪಘಾತಗಳಿಗೆ ಇದೇ ಕಾರಣ. ಆಂಗ್ಲಭಾಷೆಯಲ್ಲಿ ಒಂದು ಹೇಳಿಕೆಯಿದೆ: "For want of a nail, the shoe was lost; for want of a shoe, the horse was lost; for want of a horse, the General was lost; for want of a General, the victory was lost; for want of a victory, the country was lost" – **"**ಮೊಳೆಯಿಲ್ಲದೆ ಲಾಳ ಹೋಯಿತು; ಲಾಳವಿಲ್ಲದೆ ಕುದುರೆ ಹೋಯಿತು; ಕುದುರೆಯಿಲ್ಲದೆ ಸೇನಾನಿಯು ಹೋದನು; ಸೇನಾನಿಯಿಲ್ಲದೆ ಜಯ ಹೋಯಿತು; ಜಯವಿಲ್ಲದೆ ದೇಶವೇ ನಷ್ಟವಾಯಿತು.**"**

ನಮ್ಮ ವ್ಯಕ್ತಿತ್ವದೊಳಗಿರುವ ವಿವಿಧ ಅಂತಃಕರಣವೃತ್ತಿಗಳು ತಮ್ಮ ತಮ್ಮ ಕಾರ್ಯದಲ್ಲಿ ನಿರತವಾಗಿರುವುದು ವ್ಯಕ್ತಿತ್ವದ ಸಮತೋಲನಕ್ಕೆ ಅತ್ಯಂತ ಅವಶ್ಯಕ. ಉದಾಹರಣೆಗೆ, ಬುದ್ಧಿಯ ಕೆಲಸ ಆಲೋಚಿಸುವುದು. ಅದು ಭಾವಪರವಶವಾದರೆ ಆಲೋಚನೆ ವಿಕೃತವಾಗುತ್ತದೆ; ಎಲ್ಲ ನಿಷೇಧಾತ್ಮಕ ಭಾವಗಳನ್ನೂ ಅದು ಸಮರ್ಥಿಸತೊಡಗುತ್ತದೆ. ಆಗ ರಾಗದ್ವೇಷಾದಿಗಳೂ ಸಮರ್ಥನೀಯವಾಗಬಹುದು; ಪ್ರೀತಿಯನ್ನು ದೌರ್ಬಲ್ಯದ ಚಿಹ್ನೆ ಎಂದು ಅದು ಸಮರ್ಥಿಸಬಹುದು. ನೈತಿಕತೆ ಎಂಬುದು ದುರ್ಬಲರು ಬಲಶಾಲಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮಾಡಿಕೊಂಡಿರುವ ಒಂದು ವ್ಯವಸ್ಥೆ ಎಂದೂ ಬುದ್ಧಿಯು ಸಮರ್ಥಿಸಲು ಸಾಧ್ಯ. ಹಾಗೆಯೇ ಭಾವವು ಬುದ್ಧಿಯ ವಶವಾದರೆ ವ್ಯಕ್ತಿಯು ಭಾವಶೂನ್ಯನಾಗುತ್ತಾನೆ; ಒಣಜ್ಞಾನಿಯಾಗುತ್ತಾನೆ. ನಿಶ್ಚಯಾತ್ಮಕ ಬುದ್ಧಿಯು ನ್ಯಾಯಾಧೀಶನಿದ್ದಂತೆ; ಆಲೋಚಿಸುವ ಮನಸ್ಸು ವಕೀಲನಿದ್ದ ಹಾಗೆ; ಅಂತಸ್ಸಾಕ್ಷಿಯು ಸಾಕ್ಷಿ ಇದ್ದ ಹಾಗೆ; ಭಾವವು ಕಕ್ಷಿದಾರನಂತೆ. ಇವೆಲ್ಲವೂ ತಮ್ಮ ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಅರಿತು, ಕಾರ್ಯ ನಿರ್ವಹಿಸುವಂತಾದರೆ ವ್ಯಕ್ತಿತ್ವದ ಸಮಗ್ರತೆ ಉಂಟಾಗುತ್ತದೆ. ಇದು ಸಾಧ್ಯವಾಗುವುದು ವ್ಯವಸಾಯಾತ್ಮಿಕ ಬುದ್ಧಿಯು ಚಿರಜಾಗೃತವಾಗಿದ್ದರೆ ಮಾತ್ರ.

ವ್ಯಕ್ತಿಗಳೆಲ್ಲರೂ ವಿಕಾಸದ ವಿವಿಧ ಹಂತಗಳಲ್ಲಿರುತ್ತಾರೆ. ಮನುಷ್ಯರೆಲ್ಲರೂ ಸಮಾನರು ಎಂಬ ಭಾವನೆ ಎಷ್ಟೇ ಉದಾತ್ತವಾದರೂ ವಾಸ್ತವದಲ್ಲಿ ಅದು ಸತ್ಯವಲ್ಲ. ಮನುಷ್ಯರು ಯಾವುದೇ ಹಂತದಲ್ಲಿರಲಿ, ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂಬುದೇ ಆದರ್ಶ. ಪ್ರತಿಯೊಬ್ಬರೂ ತಾವು ಯಾವ ಹಂತದಲ್ಲಿ ಇರುವೆವೆಂಬುದನ್ನು ನಿಷ್ಪಕ್ಷಪಾತವಾಗಿ ನಿರ್ಣಯಿಸಿ ಅದಕ್ಕನುಗುಣವಾಗಿ ವರ್ತಿಸಬೇಕು, ಅದಕ್ಕನುಗುಣವಾದ ಕಾರ್ಯದಲ್ಲಿಯೇ ತೊಡಗಬೇಕು. ಕೆಲವರು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿ, ಅವರಂತೆ ಉಪನ್ಯಾಸ ಮಾಡುವುದು, ವಿದೇಶಕ್ಕೆ ಹೋಗಿ ಅಲ್ಲಿನ ಶಿಷ್ಯರನ್ನು ಪಡೆಯುವುದು ಮುಂತಾದುವನ್ನು ಅನುಕರಿಸುತ್ತಾರೆ. ಗಾಂಧೀಜಿಯ ಮಟ್ಟವನ್ನು ಏರದೆ ಅವರಂತೆ ಜೀವನ ನಡೆಸುವುದು ಸಾಧ್ಯವಾಗುವುದಿಲ್ಲ. ಸರಳವ್ಯಕ್ತಿಯಾಗದೆ ಸರಳ ಬದುಕು ನಡೆಸುತ್ತೇನೆಂದರೆ ಅದು ಹಾಸ್ಯಾಸ್ಪದವಾಗುತ್ತದೆ. ಶ್ರೀರಾಮಕೃಷ್ಣರ ವಿವಿಧ ದಿವ್ಯಭಾವಗಳನ್ನು, ದರ್ಶನಗಳನ್ನು ಗಮನಿಸುತ್ತಿದ್ದ ಅವರ ಸೇವಕರಾದ ಹೃದಯರಾಮ ಮತ್ತು ಮಥುರಮೋಹನರಿಗೆ, ತಾವೂ ಅಂತಹ ಆಧ್ಯಾತ್ಮಿಕ ಅನುಭವಗಳನ್ನು ಪಡೆಯಬೇಕೆಂದು ಆಸೆಯಾಗುತ್ತದೆ. ಶ್ರೀರಾಮಕೃಷ್ಣರನ್ನು ಅದಕ್ಕಾಗಿ ಬೇಡತೊಡಗುತ್ತಾರೆ. ಶ್ರೀರಾಮಕೃಷ್ಣರು, **"**ಅದು ನಿಮಗಲ್ಲ, ನೀವು ಯೋಗ್ಯತಾನುಸಾರ ಕಾರ್ಯನಿರತರಾಗಿರಬೇಕು**"** ಎಂದು ಎಷ್ಟು ಹೇಳಿದರೂ ಕೇಳದೆ ಅವರನ್ನು ಇಬ್ಬರೂ ಪೀಡಿಸತೊಡಗಿದರು. ಶ್ರೀರಾಮಕೃಷ್ಣರು ಕೊನೆಗೆ ಅವರ ಆಸೆಯನ್ನು ಪೂರ್ತಿಗೊಳಿಸಿದರು. ಆದರೆ ಅವರಿಗೆ ಆ ಆಧ್ಯಾತ್ಮಿಕ ಅನುಭವಗಳನ್ನು ತಡೆದುಕೊಳ್ಳಲಾಗದೆ ಅವರು ಪಡೆದಿದ್ದನ್ನು ಕಳೆದುಕೊಳ್ಳಬೇಕಾಯಿತು. ಶ್ರೀರಾಮಕೃಷ್ಣರ ಅನುಭವಗಳನ್ನು ಪಡೆದು ತಮ್ಮದಾಗಿಸಿಕೊಳ್ಳಬೇಕಾದರೆ ಅವರಂತೆ ಸಾಧನೆ ಮಾಡಿ ಆ ಯೋಗ್ಯತೆಯನ್ನು ಪಡೆದಿರಬೇಕು.